887

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಕಟಿಸಿದ್ದು.

ಬೆಂಗಳೂರು, ಶನಿವಾರ, ಡಿಸಂಬರ್ ತಾ|| 28, ಸನ್ 1889.

ಸೂಚನೆ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೇಫ್ ಜಡ್ಜ್‌ರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಪರೀಕ್ಷೆ.

ಇಸ್ತಿಹಾರ್‌ನಾಮೆ.

14ನೇ ಡಿಸಂಬರ್ 1889ನೇ ಈಸವಿ.

ಬೆಂಗಳೂರು	ಕೋಲಾರ	ಮುಂದೆ ಬರುವ ಮೈಸೂರು ಲೋಕಲ್ ಸರ್ವಿಸ್ ಮತ್ತು ಪ್ಲೀಡರು
ತುಮಕೂರು	ಮೈಸೂರು	ಗಳ ಪರೀಕ್ಷೆಗಳು, 1890ನೇ ಈಸವಿ ಜೂನ್ 16ನೇ ತಾರೀಖಿನಲ್ಲಿಯೂ ಆ
ಹಾಸನ	ಶಿವಮೊಗ್ಗಾ	ಲಾಗಾಯತು ಮುಂದೆ ಬರುವ ತಾರೀಖುಗಳಲ್ಲಿಯೂ, ಈ ಪಕ್ಕದಲ್ಲಿನ
ಚಿತ್ರದುರ್ಗ	ಚಿಕ್ಕಮಗಳೂರು	ಮೂರು ಮಾಮೂಲಿ ಸ್ಥಳಗಳಲ್ಲಿ ಜರಗುವವು.

2. ಇಂಗ್ಲಿಷ್ ಭಾಷೆಯಲ್ಲಿ ಅಚ್ಚಾಗಿರುವ ನಮೂನೆಗಳ ಮೇಲೆ ಪರೀಕ್ಷಾರ್ಥಿಗಳು ತಮ್ಮ ಅಪ್ಲಿಕೇಷ್ಣಗಳನ್ನು ಬರೆದು ಕಳುಹಿಸಬೇಕು. ನಮೂನೆಗಳು ಈ ಕೆಳಗೆ ರುಜು ಮಾಡಿರುವವರಲ್ಲಿ ದೊರೆಯುವವು. ಅಪ್ಲಿಕೇಷ್ಣಗಳು 1890ನೇ ಈಸವಿ ಮಾರ್ಚ್ 31ನೇ ತಾರೀಖಿನಲ್ಲಿ ಅಥವಾ ಅದರೊಳಗಾಗಿ ಕೆಳಗೆ ರುಜು ಮಾಡಿರುವವರಿಗೆ ತಲಪುವಹಾಗೆ ಕಳುಹಿಸಬೇಕು. ಆತರುವಾಯ ಅಪ್ಲಿಕೇಷ್ಣಗಳನ್ನು ಹಿಡಿಯುವದಿಲ್ಲ.

3. ಅದಕ್ಕಾಗಿ ಕೊಡತಕ್ಕ ಫೀ ಹಣದ ಟಿಪ್ಪಣಿಯು ಈ ಕೆಳಗೆ ನಮೂದಿಸಿದೆ.

ರೆವೆನ್ಯೂ ಪರೀಕ್ಷೆ	.. .. ..	25 ರೂಪಾಯಿ.
ಕ್ರಿಮಿನಲ್ ಡಿಟೋ	.. .. ..	25 ಡಿಟೋ
ಸಿವಿಲ್ ಡಿಟೋ	.. .. ..	25 ಡಿಟೋ
1ನೇ ದರ್ಜೆ ಪ್ಲೀಡರುಗಳ ಪರೀಕ್ಷೆ	.. ..	25 ಡಿಟೋ.
2ನೇ ಡಿಟೋ ಡಿಟೋ	.. ..	15 ಡಿಟೋ.

4. ಮೈಸೂರು ಲೋಕಲ್ ಸರ್ವಿಸ್ ಪರೀಕ್ಷೆಗೆ ನೇಮಕವಾಗಿರುವ ಫೀ ಹಣವನ್ನು ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಖಜಾನೆಗೆ ವಿನಂತಿ ಮಾಡತಕ್ಕದ್ದು. ಖಜಾನೆ ಅಧಿಕಾರಿಯು ಆ ಫೀ ಹಣವನ್ನು ತೆಗದುಕೊಂಡು ಕೊಟ್ಟ ರಸೀದಿಯು ಅಪ್ಲಿಕೇಷ್ಣಗೆ ಜಂಟಿಸಿರತಕ್ಕದ್ದು.

5. ಪ್ಲೀಡರುಗಳ ಪರೀಕ್ಷೆಗೆ ನೇಮಕವಾಗಿರುವ ಫೀ ಹಣವನ್ನು ಪರೀಕ್ಷೆಗೆ ಗೊತ್ತಾಗಿರುವ ತಾರೀಖಿಗೆ 10 ದಿವಸಗಳ ಮುಂಚೆಯೇ ಚೀಫ್ ಕೋರ್ಟು ರಿಜಿಸ್ಟ್ರಾರ್‌ರವರಲ್ಲಿ ಕೊಡತಕ್ಕದ್ದು.

ಎಸ್. ಆರ್. ಸುಬ್ಬರಾಯರ್,
ಪರೀಕ್ಷಕರ ಸಭೆಯ ಕಾರ್ಯದರ್ಶಿ.